**ಓ ಎಸ್ ನಂಃ 194/2020**
**ಪಿ ಡಬ್ಲ್ಯೂ ಃ 1**

**ದಿಃ 22.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಹೆಚ್ ಎಲ್ ವಕೀಲರಿಂದ :-**

ಜಯರಾಮ ಶೆಟ್ಟಿ ನನ್ನ ದೊಡ್ಡಪ್ಪ. ಜಯರಾಮ ಶೆಟ್ಟಿ ರವರ ತಂದೆಯ ಹೆಸರು ಆರ್ ನರಸಿಂಹಮೂರ್ತಿ. ದಾವಾ ಷೆಡೂಲ್ ಸರ್ವೆ ನಂ. ಮಲ್ಲೂರು ಗ್ರಾಮಕ್ಕೆ ಸೇರಿದ ಸ್ವತ್ತಾಗಿರುತ್ತದೆ. ದಾವಾ ಸರ್ವೆ ನಂ. ನಲ್ಲಿ ಒಟ್ಟು ವಿಸ್ತೀರ್ಣ 8 ಎಕರೆ 9 ಗುಂಟೆ ಜಮೀನು ಇದೆ ಎಂದರೆ ಸರಿ. ಮಲ್ಲೂರು ಗ್ರಾಮದ ಸರ್ವೆ ನಂ. 46 ರ ಸ್ವತ್ತು ಮೂಲತಃ ರಂಗನರಸಿಂಹಯ್ಯ ಬಿನ್ ನರಸಿಂಹ ಶೆಟ್ಟಿ ರವರಿಗೆ ಸೇರಿದ ಸ್ವತ್ತು. ರಂಗನರಸಿಂಹಯ್ಯನವರಿಗೆ 4 ಜನ ಮಕ್ಕಳು. 1) ಗಂಗನರಸಿಂಹಯ್ಯ 2) ಪಿಳ್ಳಯ್ಯ 3) ರಂಗಯ್ಯ 4) ರಾಮಯ್ಯ ಎಂದರೆ ಸರಿ. ಪ್ರತಿವಾದಿಗಳು ರಾಮಯ್ಯನವರಿಂದ ಮಲ್ಲೂರು ಗ್ರಾಮದ ಸರ್ವೆ ನಂ. 46 ರಲ್ಲಿ 2 ಎಕರೆ 20 ಗುಂಟೆ ಜಮೀನನ್ನು ದಿಃ 11.01.1967 ರಲ್ಲಿ ಕ್ರಯ ಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ಸಂಗಪ್ಪಾಜಿ ರವರ ಜಮೀನು ಎಂದರೆ ನನಗೆ ಗೊತ್ತಿಲ್ಲ, ಪಶ್ಚಿಮಕ್ಕೆ ವೆಂಕಟನರಸಿಂಹ ನವರ ಜಮೀನು ಎಂದರೆ ನನಗೆ ಗೊತ್ತಿಲ್ಲ, ಉತ್ತರಕ್ಕೆ ನರಸಿಂಹಯ್ಯನವರ ಜಮೀನು ಎಂದರೆ ನನಗೆ ಗೊತ್ತಿಲ್ಲ, ದಕ್ಷಿಣಕ್ಕೆ ಗಂಗನರಸಿಂಹಯ್ಯನವರ ಜಮೀನು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಸದರಿ ಜಮೀನನ್ನು ಕ್ರಯಕ್ಕೆ ಪಡೆದ ನಂತರ ಅವರ ಹೆಸರಿಗೆ ಖಾತಾ ವರ್ಗಾವಣೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**